ಪಿ.ಜೆ. ರಾಜ್, ಶಿವಮೊಗ್ಗ
ದೇಗುಲಕ್ಕೆ ಹೋದ ತಕ್ಷಣ ಗಂಟೆ ಹೊಡೆಯುವುದು ಏಕೆ?



ದೇವನಿಗೆ ಇವರು ಬಂದಿದ್ದು ತಿಳಿಯಬೇಕಲ್ಲ. ಗಂಟೆ ದೇವನ ಕಾಲಿಂಗ್ ಬೆಲ್.

ಕೆ.ಎನ್. ನಾರಾಯಣರೆಡ್ಡಿ, ಕೆಜಿಎಫ್
ಇಲ್ಲೊಬ್ಬ ಹಿರಿಯರು ತಮ್ಮ ಸತಿಯನ್ನು ಪರಿಚಯಿಸುವಾಗ 'ನನ್ನ ಕುಟುಂಬ' ಎಂದು ಹೇಳುವರಲ್ಲಾ...?
ಸರಿಯಿದೆಯಲ್ಲ. ಗಂಡನ ಎಲ್ಲ ಕುಟಿಲತೆಯನ್ನು ಉಂಬುವವಳೇ ಕುಟುಂಬ.

ಮೋಹನರಾಜು ಎಸ್.ಎ. ಶಿವಮೊಗ್ಗ
ವಿದ್ಯೆ ಕಲಿಸುವವ ಜ್ಯೋತಿ. ವಿದ್ಯೆ ಕಲಿಯುವವ?
ಮೋಂಬತ್ತಿ.

ಶ್ರುತಿ ರಿಗ್ರೆಟ್ ಅಯ್ಯರ್, ಬೆಂಗಳೂರು
ಪೆನ್‌ಗೂ, ಗನ್‌ಗೂ, ಕ್ಯಾಮೆರಾಗೂ ಇರುವ ಸಾಮ್ಯತೆ ಏನು?



ದೃಷ್ಟಿಕೋನ ಸರಿಯಿಲ್ಲದಿದ್ದರೆ ಮೂರೂ ಅಪಾಯಕಾರಿ. ಮೂತಿ ಮುಚ್ಚಿದರೆ ಅಪ್ರಯೋಜಕ.

ಪೊಮ್ಮ, ಹಡಗಲಿ
ಹಸಿರುಟ್ಟ ಭೂಮಿ, ಪ್ರೀತಿ ತೊಟ್ಟ ಮನಸ್ಸು ನಿಮ್ಮದಾಗಲಿ ಎನ್ನುವ ಪ್ರೇಮಿಗೆ ಏನು ಹೇಳಲಿ ರಾಮ್?
ಹಸಿರಲ್ಲಿನ ಮರ ನಾನು, ನೀ ಬಳ್ಳಿ; ಬಾ ಬಳಿ ಎನ್ನಿ.

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
ಒಂದು ಕಡೆ ಹರಿತವಿದ್ದರೆ ಚಾಕು; ಎರಡು ಕಡೆ ಹರಿತವಿದ್ದರೆ ಬಾಕು. ಸುತ್ತಮುತ್ತೆಲ್ಲ ಹರಿತವಿದ್ದರೆ?
ರಾಜಕೀಯ ನಾಯಕರ ನಾಲಿಗೆ

ಮಹಾವೀರ ಕಾಸರ, ಶಿವಮೊಗ್ಗ
ವಿಧಾನಸೌಧವನ್ನು ರೆಸಾರ್ಟ್ ಪಕ್ಕದಲ್ಲಿ ಸ್ಥಾಪಿಸಿದರೆ ಹೇಗೆ?
ಒಟ್ಟಿಗೆ ಎರಡೆರಡು ರೆಸಾರ್ಟ್ ಬೇಡವೆಂದೇ ಈಗ ದೂರ ಸ್ಥಾಪಿಸಿರುವುದು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಹರ್ಷ ಯೌವನ ತರುತ್ತದೆ. ಚಿಂತೆ ಮುಪ್ಪು ತರುತ್ತದೆ. ಸಿಟ್ಟು?
ಬಹಿರಂಗದಲ್ಲಿ ಕಂಡುಬಂದರೆ ಬ್ರೇಕಿಂಗ್ ನ್ಯೂಸಿಗನನ್ನು ಕರೆ ತರುತ್ತದೆ.

ಮೋಹನ ರು. ಹಣಗಿ, ಅಮೀನಗಡ
ಸಾಹಿತಿಗಳಿಗೇಕೆ ಸಂತೋಷವಾಗಿರಲು ಸಾಧ್ಯವಿಲ್ಲ ಸಾರ್?
ಇರುತ್ತಾರಲ್ಲ... ಅನ್ಯ ಸಾಹಿತಿಗಳನ್ನು ಅವರ ಮುಂದೆ ತೆಗಳಿದರೆ, ಸಂಭ್ರಮದ ಪಾರ್ಟಿ ಗ್ಯಾರಂಟಿ.

ಸಿ. ಆನಂದಪ್ಪ, ಬೆಂಗಳೂರು
ಕೃಷ್ಣನೂ ಅತಿ ಸಾಮಾನ್ಯನಂತೆ ಬೇಡನ ಬಾಣದಿಂದ ಪ್ರಾಣ ಕಳೆದುಕೊಂಡದ್ದು ಏಕೆ?
ವಾಲಿಯ ಸಾಲ ತೀರಿಸಬೇಕಿತ್ತಲ್ಲ. ರಾಮನಾಗಿ ಮಾಡಿದ್ದ ಸಾಲದ ಕಡೆಯ ಕಂತು ಅದು.

ಎಚ್.ಎಂ. ಅನಂತಪದ್ಮನಾಭ, ಮೈಸೂರು
ತಿಳಿಹಾಸ್ಯ ಕಟು ವಾಸ್ತವವಾದಾಗ ನಗುವುದಿಲ್ಲ. ಏಕೆ?
ವಾಸ್ತವದ ಸೌಟು ಆಡಿದಾಗ ತಿಳಿಯೆಲ್ಲ ಬಗ್ಗಡ ಆಗಿಬಿಡುವುದರಿಂದ.

ರತ್ನಾ ರಾಜ್‌ಕುಮಾರ್, ಹಾಸನ
ಒಳ್ಳೆಯ ಸ್ನೇಹಿತರು ಅವಕಾಶವಾದಿಗಳಾದರೆ...?
ಬಂಧುಗಳು ಎಂದುಕೊಳ್ಳಿ, ದೂರ ಸರಿಯಿರಿ.

ಎಚ್. ಆನಂದಕುಮಾರ್, ಚಿತ್ರದುರ್ಗ
ಮಲ್ಲಿಗೂ, ಮುಳ್ಳಿಗೂ ಏನು ವ್ಯತ್ಯಾಸ ಹೇಳು ರಾಮ್ ಶಿವಾ...?
ಮುಚ್ಚಿಟ್ಟರೆ ಮಲ್ಲಿ; ಚುಚ್ಚಿಟ್ಟರೆ ಮುಳ್ಳು.

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು
ಮದುವೆಯ ಸಂದರ್ಭದಲ್ಲಿ ಹೆಣ್ಣಿನ ಸೀರೆಗೂ, ಗಂಡಿನ ಪಂಚೆಗೂ ಗಂಟು ಹಾಕಿರುತ್ತಾರೆ. ಏಕೆ?
ಕಡೆಯ ಕ್ಷಣದಲ್ಲಿ ಮನಸ್ಸು ಬದಲಾಯಿಸಿ ಓಡಿಹೋಗದಿರಲೆಂದು.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಗೋಡೆಗೂ, ಬೇಲಿಗೂ ವ್ಯತ್ಯಾಸವೇನು?
ಗೋಡೆ ಮನೆಗೆ ಭೂಷಣ, ಬೇಲಿ ಮನಕ್ಕೆ ಭೂಷಣ.

ಶಿವಸ್ವಾಮಿ ನೇಸೇಕಟ್ಟೆ, ಬೆಂಗಳೂರು
ಅಂತಿಮಯಾತ್ರೆಯಲ್ಲಿ ನಮಗೆ ಇಷ್ಟವಾದುದನ್ನು ಕೊಂಡೊಯ್ಯುವ ಹಾಗೆ ಇದ್ದಿದ್ದರೆ.....?
ಸಾಯುವವನ ಕೈಗೆ ಏನೇನೂ ಸಿಗದಂತೆ ಬಂಧುಗಳು ಎಚ್ಚರವಹಿಸುತ್ತಿದ್ದರು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಗಂಡಸರಿಗೆ ಬರುವ ಮೀಸೆ ಹೆಂಗಸರಿಗೆ ಯಾಕೆ ಬರುವುದಿಲ್ಲ?



ತುಟಿಯ ಶೇಪ್ ಮುಚ್ಚಿಹೋಗದಿರಲೆಂದು. ಅಧರಂ ಮಧುರಮ್!

ಎಂ.ಎ. ಕುಮಾರ್, ಬೆಂಗಳೂರು
ಎಣ್ಣೆ ಹಾಕಿದರೆ ಮೈ ಬಿಸಿಯಾಗುತ್ತಾ ಅಥವಾ ತಲೆ ಬಿಸಿಯಾಗುತ್ತಾ?
ಹಾಕಿದವನ ಮೈ ಬಿಸಿಯಾಗತ್ತೆ, ಸಂಸಾರದವರ ತಲೆ ಬಿಸಿಯಾಗತ್ತೆ.

ರಮೇಶ್, ಹನುಮನಾಳು
ನೀರು ಮಳೆಯಾಗಿ ಸುರಿವುದು ನಮಗೆ ಕಾಣುತ್ತದೆ. ಕೆಳಗಿನಿಂದ ಆವಿಯಾಗುವುದು ಕಾಣೋಲ್ಲವೇಕೆ?
ಆವಿ ದಿನ; ಮೋಡ ವರ್ಷ. ಮಳೆ ಯುವತಿ. ಜನ ಮತ್ತು ಜಲ ತುಂಬಿ ಬಂದಾಗಲೇ ಗಮನಕ್ಕೆ ಬರುವುದು.

■ ರಾಮ್